REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ: ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೫ ಆಗಸ್ಟ್ ೨೦೨೨ ಬೆಲೆ : ೧ ರೂ. ಪುಟಗಳು : ೪ ಸಂಚಿಕೆ : ೮

## ಕರ್ನಾಟಕ ಆರ್ಯವೈಶ್ಯ ಮಹಾಸಭೆ (ರಿ)

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009

SUVARNA NEWS
ಕನ್ನಡಪ್ರಭ
Azadi Ka Amrit Mahotsav

# ಆತ್ಮೀಯ ಆಮಂತ್ರಣ

★★★

ಸುವರ್ಣ ಸುದ್ದಿ–ವಾಹಿನಿ ಹಾಗೂ ಕನ್ನಡಪ್ರಭ
ಸಂಯುಕ್ತ ಆಶ್ರಯದಲ್ಲಿ ಆರ್ಯವೈಶ್ಯ ಸಾಧಕರಿಗೆ



## ವಾಸವಿ ಅವಾರ್ಡ್ಸ್ ಆಫ್ ಎಕ್ಸ್‌ಲೆನ್ಸ್-2022
## ಜೀವಮಾನ ಸಾಧನಾ ಪ್ರಶಸ್ತಿ ಸಮಾರಂಭ

ದಿನಾಂಕ 4ನೇ ಸೆಪ್ಟೆಂಬರ್ 2022, ಭಾನುವಾರ ಬೆಳಿಗ್ಗೆ – 11.00ಕ್ಕೆ
ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಪ್ಯಾಲೇಸ್ ರಸ್ತೆ, ಮೈಸೂರು ಬ್ಯಾಂಕ್ ಹತ್ತಿರ, ಬೆಂಗಳೂರು

**ಉದ್ಘಾಟನೆ**

ಘನತೆವೆತ್ತ ರಾಜ್ಯಪಾಲರಾದ **ಶ್ರೀ ಥಾವರ್ ಚಂದ್ ಗೆಹ್ಲೋಟ್** ಕರ್ನಾಟಕ ಸರ್ಕಾರ

**ಮುಖ್ಯ ಅಹ್ವಾನಿತರು**

**ಶ್ರೀ ಗ್ರಂಥಿ ಮಲ್ಲಿಕಾರ್ಜುನ ರಾವ್**
ಚೇರ್ಮನ್: ಜಿ ಎಮ್ ಆರ್ ಸಮೂಹ ಸಂಸ್ಥೆಗಳು

**ಡಾ|| ಸಿ ಎನ್ ಅಶ್ವಥ್‌ನಾರಾಯಣ**
ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ಸಚಿವರು, ಕರ್ನಾಟಕ ಸರ್ಕಾರ

**ಶ್ರೀ ಡಿ ಹೆಚ್ ಶಂಕರ ಮೂರ್ತಿ**
ಮಾಜಿ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ತು.

**ಶ್ರೀ ಪಿ ಸಿ ಮೋಹನ್**
ಲೋಕಸಭಾ ಸದ್ಯಸರು

**ಶ್ರೀ ಹೆಚ್ ಪಿ ಮಂಜುನಾಥ್**
ಶಾಸಕರು, ಹುಣಸೂರು

**ಶ್ರೀ ಡಿ ಎಸ್ ಅರುಣ್**
ಸದ್ಯಸರು, ವಿಧಾನ ಪರಿಷತ್

**ಶ್ರೀ ಅಜಿತ್ ಹನುಮಕ್ಕನವರ್**
ಏಷ್ಯಾನೆಟ್ ಸುವರ್ಣ ನ್ಯೂಸ್

**ಅಧ್ಯಕ್ಷತೆ:** **ಶ್ರೀ ಆರ್. ಪಿ. ರವಿಶಂಕರ್** ಅಧ್ಯಕ್ಷರು, ಕರ್ನಾಟಕ ಆರ್ಯವೈಶ್ಯ ಮಹಾಸಭ

## ತಪ್ಪದೆ ಬನ್ನಿ ತಮ್ಮವರನ್ನು ಕರೆತನ್ನಿ

ಕಾರ್ಯಕ್ರಮದ ಮಾಹಿತಿಗಳನ್ನು ಸುವರ್ಣ ನ್ಯೂಸ್ ಚಾನೆಲ್ ಮತ್ತು
ಕನ್ನಡ ಪ್ರಭ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತದೆ. ದಯವಿಟ್ಟು ವೀಕ್ಷಿಸಿ ಸಹಕರಿಸಿ.

# ಮಹಾಸಭೆಯ ಕಾರ್ಯಕಾರಿ ಸಮಿತಿಗೆ ನಾಮ ನಿರ್ದೇಶನ ಸದಸ್ಯರು



**ಸುರೇಶ್ ಬೇವಿನ ಕಟ್ಟಿ**
ಬೆಳಗಾವಿ ಜಿಲ್ಲೆ



**ಹರೀಶ್ ವಡವಡಗಿ**
ಗದಗ ಜಿಲ್ಲೆ



**ನಾಗೇಂದ್ರ ಪ್ರಸಾದ್ ಬಿ ಆರ್**
ಕೊಡಗು ಜಿಲ್ಲೆ



**ಬಾಲಕೃಷ್ಣ ಮೂರ್ತಿ ಕೆ**
ಮಂಡ್ಯ ಜಿಲ್ಲೆ

## ಜಿಲ್ಲಾ ಸಮಿತಿ ಪದಾಧಿಕಾರಿಗಳು

| ಜಿಲ್ಲೆ | ಅಧ್ಯಕ್ಷರು | ಉಪಾಧ್ಯಕ್ಷರು | ಕಾರ್ಯದರ್ಶಿ |
|---|---|---|---|
| ಗದಗ | ರಾಘವೇಂದ್ರ ಎಸ್ ಕಾಲವಾಡ | ಅಶೋಕ ಗುಜಮಾಗಡಿ | ವೆಂಕಟೇಶ ಜಿ ಬೆಟದೂರ |
| ರಾಮನಗರ | ಬಾಲಾಜಿ ಜಿ ಕೆ | ಉಮಾಪತಿ ಕೆ ವಿ | ವೆಂಕಟೇಶ ಬಾಬು ಪಿ ಬಿ |
| ಕೊಪ್ಪಳ | ಕನ್ನಿಗೋಳ ಶ್ರೀನಿವಾಸ ಗುಪ್ತ | ಕಾಶಿವಿಶ್ವನಾಥ್ ಶಿರಿಗೇರಿ | ಗುರುರಾಜ ಡಿ |
| ಗುಲ್ಬರ್ಗ | ಮಲ್ಲಿಕಾರ್ಜುನ ಗಂಗ | ರವೀಂದ್ರ ಮಡಂ ಶೆಟ್ಟಿ | ಪ್ರಶಾಂತ ಅತನೂರು |
| ಬೀದರ್ | ದತ್ತಕುಮಾರ್ ಚಿದ್ರಿ | ರಾಜಕುಮಾರ್ ಚಿತಕ್ವಾರ | ವೆಂಕಟೇಶ ಎಸ್ ಬೊರಾಲ್ಕರ್ |
| ಯಾದಗಿರಿ | ಸುದರ್ಶನ ಚಿತ್ರಾಲ | | ಅನಿಲ್ ಸುರಪುರ |
| ಬಾಗಲಕೋಟೆ | ವೆಂಕಟೇಶ ಎಸ್ ಹಂದ್ರಾಳ್ | ಕೇಶವ ಶ್ರೀನಿವಾಸ ಕಂದಕೂರು | ಕಾಶಿನಾಥ್ ಜಿ ಬೊನಗೇರಿ |
| ಹಾವೇರಿ | ಮೂಲತೇಶ್ ಹೆಗಡಿ ಕಟ್ಟಿ | ವಸಂತ ಕುಮಾರ್ ಶೆಟ್ಟರ್ | ಶ್ರೀಮತಿ ಪದ್ಮಶ್ರೀ ಯು ಭೀಮಪ್ಪನವರ್ |
| ಹಾಸನ | ಶ್ರೀಕಾಂತ್ ಪಿ ಜಿ | | ನಾರಾಯಣ ಕೆ ಆರ್ |
| ವಿಜಯನಗರ | ಸಂಜೀವ ಶೆಟ್ಟಿ ಜಿ | ಶ್ರೀಮತಿ ಚಿದ್ರಿ ಮಾಧುರಿ | ನಂದೀಶ್ ಶೆಟ್ಟಿ ವಿ |
| ಬೆಳಗಾವಿ | ಉದಯಕುಮಾರ ಗುಂಡಾ | ವಾರೇಶ್ ಜಿ ಪತೇಪುರ್ | ವಾಸುದೇವ ಬೇವಿನ ಕಟ್ಟಿ ಎಂ |
| ಬಳ್ಳಾರಿ | ಬಾಲಾನಾಗರಾಜ ಹೆಚ್ ಆರ್ | ಪೊಗತೂರು ನಾಗರಾಜ | ಕೊಸಗಿ ನಾಗರಾಜ |

## ಉಪ ಸಮಿತಿ ಅಧಿಕಾರಿಗಳು

| ಕಮಿಟಿ ಹೆಸರು | ಛೇರ್ಮನ್ | ಸಂಚಾಲಕರು |
|---|---|---|
| ಯೋಜನಾ ಸಮಿತಿ | ವಾಸುದೇವ ಮೂರ್ತಿ ಎಸ್ ಎ | |
| ಹಾಸ್ಟೆಲ್ ಸಮಿತಿ | ಲವಕುಮಾರ್ ಬಿ ವಿ | ಶ್ರೀನಿವಾಸ ಪ್ರಸಾದ್ ಪಿ.ಎನ್ |
| ಅತಿಥಿ ಗೃಹ | ಆದಿನಾರಾಯಣ ಪ್ರಸಾದ್ ಪಿ ಎಸ್ | ಗ್ರಂಥಂ ರಮೇಶ್ ಬಾಬು |
| ಮೈಸೂರು ಪ್ರಾಜೆಕ್ಟ್ | ಸುರೇಶ್ ಹೆಚ್ ವಿ | |
| ಹುಣಸೂರು ವೃದ್ಧಾಶ್ರಮ | ಜಯಣ್ಣ ಕೆ | ಸತೀಷ್ ಎನ್ ಸಿ |
| ಟೆಕ್ನಿಕಲ್ ಸಮಿತಿ | ಮಂಜುನಾಥ್ ಎಂ ಜೆ | ಶ್ರೀಮತಿ ಶಕುಂತಲ ವಿ ಎಸ್ |
| ಬಿಲ್ಡಿಂಗ್ ಸಮಿತಿ | ಸತೀಷ್ ಎಸ್ | |
| ಪ್ರತಿಭಾಪುರಸ್ಕಾರ ಸಮಿತಿ | ಮಾನಂದಿ ರಮೇಶ್ | |
| ಕಾನೂನು ಸಲಹಾ ಸಮಿತಿ | ನರೇಂದ್ರ ಬಾಬು ಬಿ ಕೆ | |

# VALOUR AT VYSYA HOSTEL, BENGALURU





"Valour" is the first ever hostel fest conducted by Karnataka Arya Vysya Mahasabha. It was a huge success, all thanks to the president Sir R P Ravishankar. He is the main reason and under his management everything turned out well. It was held on 16th and 17th of July 2022. Sir Avinash K R who has cleared IAS exam was the chief guest on day 1 and Prof. M.Venkateshwarlu who is a Professor & Chairman at Kuvempu University was the chief guest on day 2. Vysya Hostels all across Karnataka had come to participate in the fest. And the overallchampionship was procured by Sakala Hostel, Bangalore. We even conducted a blood donation camp on the 2nd day, a lot of volunteers came forward to donate and a lot of units have been collected. It was organised by Sri Shakti blood bank & diagnostic centre. We published our very own magazine named "Colossal". Everyone who attended the event enjoyed the fest a lot and also gave good feedback





# ಅಧ್ಯಕ್ಷರ ನುಡಿ



**ವೈರಿಗಳ ಗುಂಡುಗಳನ್ನು ಎದುರಿಸಲು ನಾವು ತಯಾರಿದ್ದೇವೆ, ಸ್ವತಂತ್ರರಾಗಿಯೇ ಇದ್ದೇವೆ, ಸ್ವತಂತ್ರ್ಯರಾಗಿಯೇ ಇರುತ್ತೇವೆ. ಮಾತೃಭೂಮಿಯ ಕೆಲಸಕ್ಕೆ ಬಾರದ ಯೌವ್ವನ ನಿಷ್ಪ್ರಯೋಜಕ.** ಎಂಬ ಕ್ರಾಂತಿಕಾರಿ ಸಂದೇಶಗಳ ಮೂಲಕ ಭಾರತ ಯುವಜನತೆಯಲ್ಲಿ ಜಡತ್ವವನ್ನು ತೊಲಗಿಸಿ, ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿ, ದೇಶವಾಸಿಗಳ ಮನೆ ಮನೆಯಲ್ಲಿ ಹೋರಾಟಗಾರರನ್ನು ಹುಟ್ಟುಹಾಕಿ, ಶತಶತಮಾನಗಳ ದಾಸ್ಯದಿಂದ ಮುಕ್ತಿ ಪಡೆದ ದೇಶದ ಸ್ವಾತಂತ್ರ್ಯಕ್ಕೆ ಅಮೃತ ಮಹೋತ್ಸವ. ಭಾರತ ದೇಶದ 135 ಕೋಟಿಗೂ ಹೆಚ್ಚು ನಾಗರೀಕರು 75 ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮಿಸಿದ್ದಾರೆ. ಕೋಟ್ಯಾನು ಕೋಟಿ ನಾಗರೀಕರು ದೇಶದ ಹೆಮ್ಮೆಯ ತ್ರಿವರ್ಣ ಧ್ವಜವನ್ನು 3 ದಿನಗಳ ಕಾಲ ತಮ್ಮ ತಮ್ಮ ಕಟ್ಟಡಗಳ ಮೇಲೆ, ತಮ್ಮ ಊರಿನ ಸಾರ್ವಜನಿಕ ಸ್ಥಳಗಳಲ್ಲಿ ಹಾರಿಸುವ ಮೂಲಕ ದೇಶ ಭಕ್ತಿಯನ್ನು ಮೆರೆದಿದ್ದಾರೆ. ಸ್ವಾತಂತ್ರ್ಯದ ಅಮೂಲ್ಯತೆಯನ್ನು ಆಸ್ವಾದಿಸಿದ್ದಾರೆ. ಅಂದು ದೇಶದ ಪ್ರತಿಯೊಬ್ಬ ಪ್ರಜೆಯೂ ಸ್ವಾತಂತ್ರ್ಯ ಪಡೆಯಲು ಅಂದಿನ ಭಾರತೀಯರು ನಡೆಸಿದ ಹೋರಾಟಗಳು ಕಳೆದುಹೋದ ಜೀವಗಳು, ರಕ್ತಪಾತಗಳು, ಬಲಿದಾನಗಳನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮೌಲ್ಯವನ್ನು ಹೆಚ್ಚಿಸಬೇಕಾದ್ದು ರಾಷ್ಟ್ರನಿರ್ಮಾಣ ಶಿಲ್ಪಿಗಳಾದ ಇಂದಿನ ಯುವಜನತೆಯ ಮಹತ್ವದ ಜವಾಬ್ದಾರಿ ಎಂದರೆ ತಪ್ಪಾಗುವುದಿಲ್ಲ.

ಭಾರತವು ಬ್ರಿಟೀಷರ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿ ಎಪ್ಪತ್ತೈದು ವರ್ಷಗಳು ಗತಿಸಿದವು. ಇಂದು ನಾವು ಮಾತನಾಡುವ, ಸ್ವಂತ ವಿಚಾರಧಾರೆಗಳನ್ನು ಹಂಚಿಕೊಳ್ಳುವ, ಅಪೇಕ್ಷೆಯಂತೆ ಬದುಕುವ ಸ್ವಾತಂತ್ರ್ಯವನ್ನು ಯಥೇಚ್ಛವಾಗಿ ಅನುಭವಿಸುತ್ತಿದ್ದೇವೆ. ನಮ್ಮ ಸ್ವಾತಂತ್ರ್ಯ ಸೇನಾನಿಗಳು, ನೇತಾರರ ತ್ಯಾಗ, ನೋವು, ಸಂಘರ್ಷ, ರಕ್ತ, ಬೆವರುಗಳೇ ಇದಕ್ಕೆ ಕಾರಣ. ಆದರೆ ಇಂದಿನ ಪೀಳಿಗೆ ಸ್ವಾತಂತ್ರ್ಯ ಸಂಗ್ರಾಮ ಎನ್ನುವುದು ಒಂದು ಕಥೆಯಂತೆ ಭಾವಿಸುತ್ತಾರೆ. **ದೇಶಭಕ್ತಿಯೊಂದಿಗೆ, ರಾಷ್ಟ್ರಶಕ್ತಿಯೊಂದಿಗೆ ಬಳಸಬೇಕಿದ್ದ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರವಾಗಿ** ಉಪಯೋಗಿಸಿಕೊಂಡು ರಾಷ್ಟ್ರದ ಗೌರವಕ್ಕೆ ಕಂಟಕರಾಗುತ್ತಿರುವ ಅಸಂಖ್ಯಾತ ಯುವಜನತೆಯನ್ನು ಕಂಡಾಗ ದೇಶದ ಭವಿಷ್ಯ ಎತ್ತ ಸಾಗುತ್ತಿದೆ ಎಂಬ ಭಯವುಂಟಾಗುತ್ತದೆ. ಜಾತಿ ಜಾತಿಗಳ ನಡುವೆ, ವೈಷಮ್ಯವನ್ನು ಮೂಡಿಸಿ, ಮತ ಮತಗಳ ನಡುವೆ ಮತಾಂಧತೆಯನ್ನು ತುಂಬಿ, ಸ್ವಾರ್ಥಕ್ಕಾಗಿ ದೇಶದ ಭವಿಷ್ಯವನ್ನೇ ಅಡಮಾನ ಮಾಡುತ್ತಿರುವ ರಾಜಕಾರಿಣಿಗಳನ್ನು ಕಂಡಾಗ ರಕ್ತಕುದಿಯದಿರುವ ವ್ಯಕ್ತಿ ಈ ದೇಶದ ಪ್ರಜೆ ಎಂದು ಹೇಳಿಕೊಳ್ಳಲು ನಾಚಿಕೆ ಎನಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಸೇನಾನಿ ಶ್ರೀ ಭಗತ್ ಸಿಂಗ್‌ರ ಒಂದು ನುಡಿ **ಯಾವುದೇ ವ್ಯಕ್ತಿಯನ್ನು ಸಾಯಿಸುವುದು ಸುಲಭ. ಆದರೆ ಅವನ ವಿಚಾರಗಳನ್ನು ಸಾಯಿಸುವುದು ಅಷ್ಟು ಸುಲಭವಲ್ಲ. ದೊಡ್ಡ ಸಾಮ್ರಾಜ್ಯಗಳೇ ಮಣ್ಣಾಗುತ್ತದೆ ಆದರೆ, ವಿಚಾರಗಳು ಸದಾ ಜೀವಂತವಾಗಿರುತ್ತದೆ.** ಎಂಬ ವಿಚಾರಧಾರೆ ಅಂದಿಗೂ ಇಂದಿಗೂ ಎಂದೇಎಂದಿಗೂ ನಾವು ಮನನ ಮಾಡಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದಂತಹ ಕೆಚ್ಚೆದೆಯ ನುಡಿಗಳು. ಅಂತಹ ಸ್ವಾತಂತ್ರ್ಯ ನಮಗೆ ದೊರಕಿದೆ, ಅಂತಹ ಸ್ವಾತಂತ್ರ್ಯ ಭಾರತದಲ್ಲಿ ನಾವು ಜೀವಿಸುತ್ತಿದ್ದೇವೆ. ದೇಶವನ್ನು ಕಾಯಲು ಸೈನಿಕರು ಇರುವಂತೆ ದೇಶದ ಭವಿಷ್ಯವನ್ನು ಮುಗಿಲೆತ್ತರಕ್ಕೇರಿಸಲು ನಾವುಗಳು ಕಾರ್ಯನಿರ್ವಹಿಸಿದಾಗ ಮಾತ್ರವೇ ಲಕ್ಷಾಂತರ ಸ್ವಾತಂತ್ರ್ಯ ಸಂಗ್ರಾಮದ ಅಮರ ಜೀವಿಗಳ ಆತ್ಮಕ್ಕೆ ಶಾಂತಿ ಲಭಿಸುತ್ತದೆ.

ಯುವ ಮಿತ್ರರೇ, **ಸ್ವಾರ್ಥಕ್ಕಾಗಿ ಬದುಕುವ ಜೀವನ ನಿಮ್ಮದಾಗಬಾರದು,** ಸದೃಢ ಭಾರತದ ನಿರ್ಮಾಣಕ್ಕಾಗಿ ದುಡಿಯುವ ಛಲ ನಿಮ್ಮದಾಗಬೇಕು, ಈ ದೇಶದ ಸಂಸ್ಕೃತಿ, ಈ ದೇಶದ ಆಸ್ತಿತ್ವ, ಸ್ವಾಭಿಮಾನ ಬೆಳೆಸುವ ಸೇನಾನಿಗಳಾಗಿ, ಸೇವಾವ್ರತಿಗಳಾಗಿ ನೀವೂ ಬೆಳೆದು ದೇಶವನ್ನು ಬೆಳೆಸಿ ಕರ್ಮಯೋಗಿಗಳಾಗಿ ಭಾರತ ದೇಶವನ್ನು ವಿಶ್ವಗುರುವಾಗಿ ನಿರ್ಮಾಣ ಮಾಡುವ ಛಲ ನಿಮ್ಮದಾದಾಗ ಮಾತ್ರವೇ ನೀವೂ ಸಹ ಜನ್ಮ ಭೂಮಿಯ ಋಣ ತೀರಿಸಿದಂತಾಗುತ್ತದೆ. ಪ್ರತಿಭಾವಂತರಾಗಿ ದೇಶದ ಅಭಿವೃದ್ಧಿಗಾಗಿ ಪ್ರತಿಭೆಯನ್ನು ಸದ್ಬಳಕೆ ಮಾಡಿಕೊಳ್ಳಿ. ಸ್ವಾರ್ಥಕ್ಕಾಗಿ ಪ್ರತಿಭಾ ಪಲಾಯನವಾಗಬಾರದು. ಒಂದು ವೇಳೆ ಅನಿವಾರ್ಯವಾಗಿ **ದೇಶ ಬಿಟ್ಟು ಹೋದರೂ ಸರಿ ನಾನು ಭಾರತೀಯನೆಂಬ ಸ್ವಾಭಿಮಾನವಿರಲಿ.** ಜನ್ಮಭೂಮಿಗಾಗಿ ಮನಮಿಡಿಯುತ್ತಿರಲಿ. ನಿಮ್ಮ ಪ್ರತಿಭೆ ದೇಶದ ಜನತೆಗೆ ಮಾದರಿಯಾಗಲಿ ಎಂದು ಆಶಿಸುತ್ತಾ ಪ್ರತಿಯೊಬ್ಬ ಓದುಗರಿಗೂ ಭಾರತ **ದೇಶದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಶುಭಾಷಯಗಳನ್ನು ತಿಳಿಸುತ್ತೇನೆ.**

**ಆತ್ಮ ಬಲಂ ಬಲಂ** ಎಂದಿದ್ದಾರೆ ಬಲ್ಲವರು. ಎಲ್ಲ ಬಲಗಳಲ್ಲೂ ಆತ್ಮ ಬಲವೇ ಶ್ರೇಷ್ಠವಾದದ್ದು, ಅದ್ಭುತವಾದದ್ದು ಅದುವೇ ಮಾನವನ ಆಂತರಿಕ ಶಕ್ತಿ ಪ್ರಕೃತಿಯ ಬಾಹ್ಯ ಶಕ್ತಿಗಳು ಮತ್ತು ಅದರ ಪ್ರಖರವಾದ ಒತ್ತಡವನ್ನು ಸಹಿಸಿ, ನಿಗ್ರಹಿಸಿ ಉಪಯೋಗಿಸಿ ಕೊಂಡು ಹೊಸ ಶಕ್ತಿಯ ಅವಿಷ್ಕಾರಕ್ಕೆ ಮೂಲ ಕಾರಣವಾದ ಮಾನವನ ಬುದ್ಧಿ ಶಕ್ತಿಗೂ ಮಿಗಿಲಾದ ಯಾವ ಶಕ್ತಿಯೂ ಇಲ್ಲ. ಪ್ರಾಕೃತಿಕ ಶಕ್ತಿಯನ್ನು ಮೆಟ್ಟಿ ನಿಲ್ಲುವ ಮಾನವ, ಹರಿವ ನೀರನ್ನು ತಡೆಹಿಡಿದು ವಿದ್ಯುತ್ ಶಕ್ತಿಯಾಗಿ ಮಾರ್ಪಾಡಿಸುತ್ತಾನೆ, ಸಾಗರದ ಆಳದಲ್ಲಿ ನಡೆದು ಹುಡುಕಾಟ ಪ್ರಾರಂಬಿಸಿದ್ದಾನೆ. ನೀರಿನ ಒತ್ತಡದಿಂದಲೂ ಶಕ್ತಿ ಪಡೆಯಲು ಯೋಚಿಸಿದ್ದಾನೆ. ಅಂತಹ ಸಾಧನೆಗಾಗಿ ಧೈರ್ಯಬೇಕು, ಅದಕ್ಕಾಗಿಯೇ **ಧೈರ್ಯಂ ಸರ್ವತ್ರಸಾಧನಂ** ಎಂದದ್ದು. ಪರಿಶ್ರಮದಿಂದ ಬೇಕಾದ್ದನ್ನುಸಾಧಿಸಬಹುದು ಆದರೆ ಅದು ಸತ್ಕಾರ್ಯಕ್ಕೆ ಮಾತ್ರ ಸೀಮಿತವಾಗಿರಬೇಕು. **ಅಸಾಧ್ಯವೆಂಬುದು ಈ ಜಗತ್ತಿನಲ್ಲಿ ಏನೂ ಇಲ್ಲ, ಬುದ್ಧಿ, ಸಹನೆ, ಜ್ಞಾನ, ಇದ್ದವನು ಯಾವುದಕ್ಕೂ ಹೆದರಲಾರ. ತನ್ನ ಮನಸ್ಸಿನಲ್ಲಿ ಇದ್ದದನ್ನು ಸಾಧಿಸುವ ಹಟವೇ ಛಲ ಇಂಥಹ ಛಲಗಾರರನ್ನು ಇತಿಹಾಸದಲ್ಲಿ ನಾವು ಕಾಣುತ್ತೇವೆ.** ಮಹಮ್ಮದ ಗೋರಿಯು ಹದಿನೇಳು ಸಲ ಸೋತರೂ ತ್ರಿವಿಕ್ರಮನಂತೆ ಹಠಸಾಧಿಸಿದ. ಹದಿನೆಂಟನೇ ಸಲ ಪೃಥ್ವಿರಾಜನನ್ನು ಸೋಲಿಸಿದನು. ಪೃಥ್ವಿರಾಜನ ನಿರಾಸಕ್ತಿಯೇ ಅವನ ಸೋಲಿಗೆ ಕಾರಣವಾಯಿತು. ಅದಕ್ಕಾಗಿಯೇ ನಾವು ಸದಾ ಜಾಗೃತರಾಗಿರಬೇಕಾದ್ದು ಅವಶ್ಯ. ಅಂತಹ ಪರಮಾದ್ಭುತ ಛಲಗಾರರು ನಾವಾಗಬೇಕು. **ಮಾತಿಗಿಂತ ಕೃತಿಗಳ ಮೂಲಕ ಜವಾಬ್ದಾರಿಯನ್ನು ಪ್ರದರ್ಶಿಸಬೇಕು.** ಅಂತಹ ಜವಾಬ್ದಾರಿಗಳ ಪರಿಣಾಮಕಾರಿ ನಿರ್ವಹಣೆಯಿಂದ ಬದುಕು ಸಾರ್ಥಕವಾಗುತ್ತದೆ. ದೇಶ ಪ್ರಗತಿಯತ್ತ ಸಾಗುತ್ತದೆ.

ನಮ್ಮ ಸಾಧನೆಗಳಿಗೆ ಪೂರಕ ಶಕ್ತಿ ನಮ್ಮಲ್ಲಿರುವ ಉತ್ಸಾಹ. ಉತ್ಸಾಹದಂಥ ಇಂಧನ ಇನ್ನೊಂದಿಲ್ಲ. ಅದು ಬೆಟ್ಟವನ್ನು ಕೂಡ ಸರಿಸಬಲ್ಲದು. ಅದಕ್ಕೆ ಸಾಧ್ಯವಾಗದೇ ಇರುವುದು ಯಾವುದೂ ಇಲ್ಲ. **ನಮ್ಮಲ್ಲಿ ಪ್ರತಿಭೆ ಪರಿಣತಿ ಏನೇ ಇರಲಿ, ಸನ್ನಿವೇಶ ನಮಗೆ ಎಷ್ಟೇ ಅನುಕೂಲವಾಗಿರಲಿ, ಉತ್ಸಾಹ ಇಲ್ಲದೇ ಹೋದರೇ ಅವುಗಳಿಂದ ಏನೊಂದೂ ಆಗುವುದು ಸಾಧ್ಯವಿಲ್ಲ.** ಉತ್ಸಾಹ ಇಲ್ಲದಿದ್ದವನು ಎರಡು ಕಾಲಿನ ಪ್ರಾಣಿ ಎಂದೆನಿಸಬಹುದಲ್ಲವೇ, ಅವನು ಮನುಷ್ಯನೆನಿಸಲಾರ. ಒಂದು ಕೆಲಸ ಆಗದಿದ್ದರೆ ಉತ್ಸಾಹಶಾಲಿಯಾದವನು ಮರಳಿ ಪ್ರಯತ್ನ ಮಾಡುತ್ತಾನೆ. ಕೆಲಸ ಆಗುವವರೆಗೂ ಅವನು ಅದನ್ನು ಕೈ ಬಿಡುವುದೇ ಇಲ್ಲ.

ನಿರಂತರವೂ ಕೆಲಸದಲ್ಲಿ ನಿರತನಾದ ಮನುಷ್ಯನಿಗೆ ಸಮಯವು ಸಿಕ್ಕುವಂತೆ, ಆಲಸಿಯಾದ ಮನುಷ್ಯನಿಗೆ ಯಾವುದಕ್ಕೂ ಸಮಯವೇ ಸಿಕ್ಕುವುದಿಲ್ಲ. ನಾವು ಮನಸ್ಸುಗೊಟ್ಟು ಮಾಡುವ ಕೆಲಸವು ನಮಗೆ ಅನೇಕ ಸದ್ಗುಣಗಳನ್ನು ಕಲಿಸಿ ಕೊಡುತ್ತದೆ. **ಕೆಲಸದಲ್ಲಿರುವ ನಮ್ಮ ಮನಸ್ಸು ಬೇರೆ ಯಾವುದರ ಕಡೆಗೂ ಹರಿಯುವದಕ್ಕಾಗಲಿ ನಾವು ಕೆಡುವುದಕ್ಕಾಗಲಿ, ಬೇರೆಯವರನ್ನು ಕೆಡಿಸಿವುದಕ್ಕಾಗಲಿ, ನಮಗೆ ಸಮಯವೇ ಇರಲಾರದು.** ಕೆಲಸ ಮಾಡುವವನು ತಾನೂ ಸುಖ ಪಡುತ್ತ, ಲೋಕದ ಸಂತೋಷಕ್ಕೂ ಕಾರಣವೆನಿಸುತ್ತಾನೆ.

**ಚಂದನಂ ಶೀತಲಂ ಲೋಕೇಚಂದನಾದಪಿ ಚಂದ್ರಮಾಹ:**
**ಚಂದಶೀತಲ ಯೋರ್ಮಧ್ಯೇ ಶೀತಲಾ ಸಾಧು ಸದ್ಗತಿ**

ಸತ್ ಧರ್ಮಕ್ಕಾಗಿ ಸಾಧು ಸಜ್ಜನರ ಸಂಘ ಮಾಡಬೇಕು. ಅದು ಚಂದನದ ಮತ್ತು ಚಂದ್ರನ ಬೆಳಕಿನಂಥ ತಂಪನ್ನುದಯಮಾಡಿಸುತ್ತದೆ. ಹಾಗೆ ಸಾಧು ಸಜ್ಜನರ ಸಂಗವೂ ಕೂಡ ಚಂದ್ರ ಮತ್ತು ಚಂದನದ ತಂಪು ಸುಖವನನು ಕೊಡುತ್ತದೆ.

ಬಂಧುಗಳೇ, ನಾವು ಬೆಳೆಯಬೇಕು, ನಾವೂ ಬೆಳಗಬೇಕು ಈ ದೇಶ ನಮ್ಮದೆಂಬ ಸ್ವಾಭಿಮಾನದಿಂದ **ದೇಶಕಟ್ಟುವ ಶಿಲ್ಪಿಗಳಾಗಿ ಸಮರ್ಥ ರಾಷ್ಟ್ರನಿರ್ಮಾಣಕ್ಕಾಗಿ ಕಿಂಚಿತ್ ಸೇವೆ ಸಲ್ಲಿಸಿ, ಭಾರತ ವಿಶ್ವಗುರುವಾಗಿ ವಿಶ್ವಕ್ಕೆ ಸಂಸ್ಕಾರವನ್ನು, ಸಂಸ್ಕೃತಿಯನ್ನು ಕೊಡುವಂತಹ ಅಧಮ್ಯ ಶಕ್ತಿಯಾಗಬೇಕು** ಎಂಬ ಕಲ್ಪನೆ ನಿಮ್ಮಲ್ಲಿ ಹುಟ್ಟಿ ಬೆಳೆದು ಹೆಮ್ಮರವಾದರೆ ಸ್ವಾತಂತ್ರ್ಯಕ್ಕಾಗಿ ಮಡಿದ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೋಟ್ಯಾನುಕೋಟಿ ಆತ್ಮಗಳಿಗೆ ನೆಮ್ಮದಿ ದೊರೆಯುತ್ತದೆ. ನಮ್ಮ ಜನ್ಮ ಸಾರ್ಥಕವಾಗುತ್ತದೆ.

**ಸಮಸ್ತ ಬಂಧುಗಳಿಗೆ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಷಯಗಳು,** ವಿಘ್ನೇಶ್ವರನ ಆರಾಧನೆ ನಮ್ಮ ಮನೆ ಮನಗಳನ್ನು ಬೆಳಗಲೆಂದು ಹಾರೈಸುತ್ತೇನೆ.

> **ಅವಮಾನ ಆಗಿದೆ ಎಂದು ಅವಮಾನದ ವಿರುದ್ಧ ಸಂಘರ್ಷ ಮಾಡಬೇಕೇ ವಿನಃ ಅಧರ್ಮದ ಜೊತೆಗೂಡಬಾರದು ಆಧರ್ಮದ ಜೊತೆ ಇದ್ದಮೇಲೆ ಎಷ್ಟು ತಪಸ್ಸು ದಾನ ಮಾಡಿದರು ಫಲವಿಲ್ಲ**

**ಆರ್ ಪಿ ರವಿಶಂಕರ್**
ಅಧ್ಯಕ್ಷರು

LAST DATE FOR APPLICATION 15.10.2022

# ರಾಜ್ಯಮಟ್ಟದ ಪ್ರತಿಭೋತ್ಸವ-2022

## ಈ ಭಾರಿ ಬೆಂಗಳೂರು ನಗರದಲ್ಲಿ

### ಕರ್ನಾಟಕ ರಾಜ್ಯ ಆರ್ಯವೈಶ್ಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನ

**ಆತ್ಮೀಯ ಕುಲಬಾಂಧವರೇ,**

ಈ ವರ್ಷದ ಪರೀಕ್ಷೆಗಳಲ್ಲಿ ಎಸ್ ಎಸ್ ಎಲ್ ಸಿ , 2ನೇ ಪಿ ಯು ಸಿ, ಡಿಗ್ರಿ ಹಾಗು ಉನ್ನತ ಪರಿಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಮಾಜದ ಕೀರ್ತಿಯನ್ನು ಬೆಳಗಿರುವ ಸಮಸ್ತ ವಿದ್ಯಾ ಮಾಣಿಕ್ಯಗಳನ್ನು ಕರ್ನಾಟಕ ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇವೆ.

ಶ್ರದ್ದೆ, ಆತ್ಮ ವಿಶ್ವಾಸ, ಸತತ ಪರಿಶ್ರಮಗಳಿಂದ 2021–22 ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಅಂತಿಮ ಪರೀಕ್ಷೆಗಳಲ್ಲಿ ಉತ್ತಮೋತ್ತಮ ಅಂಕಗಳನ್ನು ಪಡೆದ ವಿದ್ಯಾ ಮಾಣಿಕ್ಯಗಳನ್ನು ರಾಜ್ಯ ಮಟ್ಟದಲ್ಲಿ , ರಾಜ್ಯ ನಾಯಕರ, ರಾಜ್ಯದ ಸಮುದಾಯದ ಸಮ್ಮುಖದಲ್ಲಿ ಅಭೂತಪೂರ್ವವಾಗಿ ಅಭಿನಂಧಿಸಲು ಮಹಾಸಭೆ ನಿರ್ಧಸಿದೆ.

ಮಹಾಸಭೆ ವತಿಯಿಂದ ರಾಜ್ಯದ ನಾನಾ ಭಾಗಗಳಲ್ಲಿ ಅತ್ಯಂತ ಅಮೋಘವಾಗಿ ನಡೆದದಿರುವ ಹಾಗೂ ಸಹಸ್ರಾರು ಕುಲಭಾಂದವರ ಮೆಚ್ಚುಗೆಗೆ ಪಾತ್ರವಾಗಿರುವ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ವೈಭವ ಪ್ರತಿಯೊಬ್ಬರ ನಿರೀಕ್ಷೆಗೆ ಮೀರಿದ್ದಾಗಿರುತ್ತದೆ.

ಅಂತಹ ಅವರ್ಣನೀಯ ವರ್ಣರಂಜಿತ 12ನೇ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮವನ್ನು ಬೆಂಗಳೂರು ನಗರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಾಧನೆ ಮೆರೆದ ವಿದ್ಯಾರ್ಥಿಗಳಿಗೆ ಜೀವನದಲ್ಲಿ ದೊರೆಯಬಹುದಾದ ಏಕೈಕ ಅಪೂರ್ವ ಅವಕಾಶ

### ಸೂಚನೆಗಳು

★ **2021–22 ಶೈಕ್ಷಣಿಕ ವರ್ಷದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರತಿಭಾ ಪುರಸ್ಕಾರ ಅನ್ವಯವಾಗುತ್ತದೆ.**

★ **S.S.L.C ಮತ್ತು PUC ಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವವರು ಮತ್ತು ಅಂತಿಮ ಡಿಗ್ರಿ ಮತ್ತು ಇಂಜನಿಯರಿಂಗ್, ವೈದ್ಯಕೀಯ, ಸ್ನಾತಕೋತ್ತರ ಪದವಿ ಇತ್ಯಾದಿ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದವರು.**

★ **ಯಾವುದೇ ವಿಶ್ವವಿದ್ಯಾನಿಲಯಗಳಿಂದ ಪಿ.ಹೆಚ್.ಡಿ ಪಡೆದವರು**

★ **ಯಾವುದೇ ವಿಶ್ವವಿದ್ಯಾನಿಲಯಗಳಿಂದ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಯಾವುದೇ ಗೆಜೆಟೆಡ್ ಅಧಿಕಾರಿ ಅಥವಾ ಬ್ಯಾಂಕ್ ಮ್ಯಾನೇಜರ್ ಅಥವಾ ತಮ್ಮ ಶಾಲಾ /ಕಾಲೇಜು ಪ್ರಾಂಶುಪಾಲರಿಂದ ಸಹಿ ಮಾಡಿದ ಜೆರಾಕ್ಸ್ ಪ್ರತಿಗಳನ್ನು ONLINE ನಲ್ಲಿ ಕಳುಹಿಸಲು ಕೋರಿದೆ.**

★ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ – 15.10.2022

★ **ಅರ್ಜಿಗಳನ್ನು ಪಡೆಯಲು** www.kavms.com **ಭೇಟಿ ಮಾಡಿ**

## ಕರ್ನಾಟಕದ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ 2022–23ರ ಸಾಲಿನ ವಿಶೇಷ ಯೋಜನೆ

ಕರ್ನಾಟಕ ಆರ್ಯವೈಶ್ಯ ಮಹಾಸಭೆ

ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಆಶಾಕಿರಣ

# ಆರ್ಯವೈಶ್ಯ ವಿದ್ಯಾರ್ಥಿಮಿತ್ರ

LAST DATE FOR APPLICATION 30.10.2022

> ನೀವು ಪ್ರತಿಭಾವಂತ ವಿದ್ಯಾರ್ಥಿಗಳೇ? > ನಿಮಗೆ ವೃತ್ತಿಪರ ಕೋರ್ಸ್ ಮಾಡಲು ಆರ್ಥಿಕವಾಗಿ ಸಮಸ್ಯೆ ಇದೆಯೇ? > ಬ್ಯಾಂಕುಗಳಂದ ಶಿಕ್ಷಣ ಸಾಲ ಪಡೆಯಲು ಆಗಲಿಲ್ಲವೇ?

### ನಿಮ್ಮ ಶಿಕ್ಷಣ ಮುಂದುವರಿಸಲು ನಿಮಗೆ ಸಹಾಯ ನೀಡಲು ನಿಮ್ಮ ಜೊತೆಗಿದೆ–ನಿಮ್ಮ ಮಹಾಸಭೆ.

ಬಡತನದಲ್ಲಿ ಹುಟ್ಟುವುದು ನಮ್ಮ ತಪ್ಪಲ್ಲ–ಆದರೆ ಬಡತನದಲ್ಲಯೇ ಸಾಯವುದು ಮಾತ್ರ ನಮ್ಮ ತಪ್ಪು, ಬಡತನ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಶಾಪವಾಗಬಾರದು, ಪ್ರತಿಭೆಗಳು ಸೊರಗಲೂಬಾರದು. ಮನೆಯಲ್ಲಿ ಒಬ್ಬರು ವಿದ್ಯಾವಂತರಾದರೆ, ಅವರ ಮೂಲಕ ಕುಟುಂಬವೇ ಆರ್ಥಿಕವಾಗಿ ಸದೃಢವಾಗಬೇಕೆಂಬ ಉನ್ನತ ಧ್ಯೇಯೋದ್ದೇಶಗಳೊಂದಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಮಾಜದ ಆರ್ಥಿಕವಾಗಿ ತೊಂದರೆಯಲ್ಲಿರುವ ವೃತ್ತಿಪರ ಕೋರ್ಸುಗಳಲ್ಲಿ ಅಂದರೆ, ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು ಕೋರ್ಸುಗಳಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಬಡ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಕೋರ್ಸ್ ಆರಂಭದಿಂದ ಕೊನೆಯವರೆವಿಗೂ ಕಾಲೇಜಿಗೆ ಪಾವತಿ ಮಾಡಬೇಕಿರುವ ಪೂರ್ಣ ಫೀ ಹಣವನ್ನು ಅಥವಾ ಗರಿಷ್ಠ 1,00,000–00(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ಮಹಾಸಭೆಯ ಷರತ್ತುಗಳನ್ವಯ ಕೊಡಿಸಲಾಗುತ್ತದೆ.

### ಅರ್ಹತೆಗಳು

> ಫಲಾನುಭವಿ ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.

> ಯಾವುದೇ ಬೇರೆ ಸಂಘ/ಸಂಸ್ಥೆಗಳಿಂದ/ಬ್ಯಾಂಕುಗಳಿಂದ, ಯಾವುದೇ ರೀತಿಯ ವಂತಿಗೆ/ಸಾಲ ಪಡೆದುಕೊಂಡಿರಬಾರದು.

> ಸರ್ಕಾರದ ಕೋಟಾದಡಿ ಸೀಟು ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.

> ಪ್ರತೀ ಅರೆ/ವಾರ್ಷಿಕ ಪರೀಕ್ಷೆಗಲ್ಲಿ ಕನಿಷ್ಟ ಪ್ರಥಮ ದರ್ಜೆಯಲ್ಲಿ (FIRST CLASS) ಉತ್ತೀರ್ಣರಾಗಿರಬೇಕು. ತಪ್ಪಿದಲ್ಲಿ ಸೌಲಭ್ಯವನ್ನು ನಿಲ್ಲಿಸಲಾಗುತ್ತದೆ.

> ಕರ್ನಾಟಕ ರಾಜ್ಯದಲ್ಲಿಯೇ ಎರಡನೇ ಪಿ.ಯು.ಸಿ ವರೆವಿಗೂ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.

> ಸಹಕಾರ ಸಂಘಗಳ ಮೂಲಕ ಬಡ್ಡಿರಹಿತ ಸಾಲ ಸೌಲಭ್ಯ ಮಾಡಿಕೊಡಲಾಗುತ್ತದೆ.

> ವಿದ್ಯಾರ್ಥಿಗಳ ಕೋರ್ಸು ಮುಗಿದ 6 ತಿಂಗಳ ನಂತರ ಗರಿಷ್ಠ 36 ತಿಂಗಳ ಒಳಗಾಗಿ ಸಾಲದ ಮೊತ್ತವನ್ನು ಕಂತುಗಳಲ್ಲಿ ಪೂರ್ಣವಾಗಿ ಪಾವತಿ ಮಾಡಬೇಕಾಗುತ್ತದೆ.

> ಸ್ಥಳೀಯ ಆರ್ಯವೈಶ್ಯ ಸಂಘಗಳ/ಮಹಾಸಭಾ ನಿರ್ದೇಶಕರ ಅನುಮತಿ ಪತ್ರ ಕಡ್ಡಾಯ.

> ಈ ಯೋಜನೆಯಲ್ಲಿ ಸಹಕಾರ ಕೋರಿ ಮಹಾಸಭೆಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿಗಳನ್ನು ಊರ್ಜಿತ/ಅನೂರ್ಜಿತಗೊಳಿಸುವ ಪೂರ್ಣ ಅಧಿಕಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ಇರುತ್ತದೆ. ಮತ್ತು ಯಾವುದೇ ಸಂದರ್ಭದಲ್ಲಿ ಮಹಾಸಭೆಯ ಯೋಜನೆಯನ್ನು ಹಿಂಪಡೆಯುವ ಅಧಿಕಾರ ಮಹಾಸಭೆ ಹೊಂದಿರುತ್ತದೆ.

> ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅದೀಕೃತ ವೆಬ್‌ಸೈಟ್ **www.kavms.com** ಮೂಲಕ **online** ಅರ್ಜಿಗಳನ್ನು ಸಲ್ಲಿಸಲು **ಕೊನೆಯ ದಿನಾಂಕ 30–10–2022**

> ಹೊರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

> ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿಸಲ್ಲಿಸಲು ಅವಕಾಶವಿರುತ್ತದೆ.

> ಒಂದು ಕುಟುಂಬದ ಇಬ್ಬರು ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳುವ ಅವಕಾಶವಿರುವುದಿಲ್ಲ.

> ಯೋಜನೆಗೆ ಸಂಬಂದಿಸಿದ ನಿಯಮ ನಿಬಂಧನೆಗಳನ್ನು ಆಗಿಂದ್ದಾಗ್ಗೆ ಪರಿಷ್ಕರಿಸುವ ಅಧಿಕಾರ ಮಹಾಸಭೆ ಇರುತ್ತದೆ.

> ಯಾವುದೇ ವಿದ್ಯಾರ್ಥಿಗಳು/ಪೋಷಕರು ತಪ್ಪು ಮಾಹಿತಿಗಳನ್ನು ನೀಡಿ ಈ ಯೋಜನೆಯಿಂದ ಸೌಲಭ್ಯ ಪಡೆದಿದೆ ಎಂದು ತಿಳಿದು ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ನೀಡಿರುವ ಸಾಲದ

> ಮೊತ್ತವನ್ನು ಬ್ಯಾಂಕ್ ಅಥವಾ ಸಹಕಾರ ಸಂಘದ ಬಡ್ಡಿಯೊಂದಿಗೆ ಕೂಡಲೇ ವಾಪಸ್ಸು ಪಡೆಯಲಾಗುತ್ತದೆ. ಮತ್ತು ಅಂತಹ ವಿದ್ಯಾರ್ಥಿಗಳ ಮತ್ತು ಪೋಷಕರ ಹೆಸರು ಮತ್ತು ಫೋಟೊವನ್ನು ಮಹಾಸಭೆಯ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ಒಬ್ಬ ವಿದ್ಯಾರ್ಥಿ ಮಹಾಸಭೆಯಿಂದ ಒಂದು ರೀತಿಯ ಅನುಕೂಲವನ್ನು ಪಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಲಾಗಿದೆ.
ಅವುಗಳೇಂದರೆ ಲ್ಯಾಪ್‌ಟಾಪ್/ ವಿದ್ಯಾರ್ಥಿಮಿತ್ರ ಸಾಲ ಯೋಜನೆ/ ಹಾಸ್ಟೆಲ್‌ನಲ್ಲಿ ಉಚಿತ ಸೀಟ್.

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152